INDIAN JOURNAL OF HISTORY AND ARCHAEOLOGY
ISSN (e):2582-225X www.ijha.in
Vol-5, Issue -6, November-December, 2023,
PageNo,35-42
Peer -Reviewed, Refereed Journal

# ಮನವಿಲ್ಲದವರ ಮಧ್ಯೆಯೇ ಬೆಂದು ಅರಳಿದ ಬದುಕು–ಒಂದು ಅವಲೋಕನ

ಹರೀಶ.ಎನ್.[1]
ಪ್ರೊ.ಕೆ.ತಿಮ್ಮಯ್ಯ.[2]

ತಮ್ಮ ಜೀವನದ ವೃತ್ತಾಂತವನ್ನು ತಾವಾಗಿಯೇ ಅಥವಾ ಕೆಲವೊಮ್ಮೇ ಮತ್ತೊಬ್ಬರ ಸಹಾಯದೊಂದಿಗೆ ಬರೆದ ಪುಸ್ತಕವನ್ನು ಆತ್ಮಕಥೆ ಅಥವಾ ಆತ್ಮಚರಿತ್ರೆ ಎಂದು ಕರೆಯಲಾಗುತ್ತದೆ. ಒಂದು ಆತ್ಮಕಥೆಯು ಒಬ್ಬ ವ್ಯಕ್ತಿಯು ತನ್ನ ಜೀವನದ ಚರಿತ್ರೆಯನ್ನು ತಾನೇ ಬರೆದರೆ ಅದನ್ನು ಆತ್ಮಕಥೆ, ಆತ್ಮವೃತ್ತ ಎನ್ನಬಹುದು. ಅದೇ ವ್ಯಕ್ತಿಯ ಚರಿತ್ರೆಯನ್ನು ಬೇರೊಬ್ಬ ವ್ಯಕ್ತಿ ಬರೆದಾಗ ಅದು ಜೀವನಚರಿತ್ರೆ ಎನ್ನಬಹುದು. ಇಂತಹ ಆತ್ಮಕಥೆಗಳು ಸಾಹಿತ್ಯ ಒಂದು ಪ್ರಮುಖ ಪ್ರಕಾರವೇ ಆಗಿರುತ್ತದೆ. ಅದರಲ್ಲಿ ದಿನಚರಿ, ನಿಯತಕಾಲಿಕೆಗಳು, ಬಖೈರುಗಳು, ವೈಯಕ್ತಿಕ ಪ್ರಬಂಧಗಳು ಈ ಆತ್ಮಕಥೆಯ ವರ್ಗಕ್ಕೆ ಸೇರುತ್ತವೆ ಎಂದು ಹೇಳಬಹುದು. ಒಬ್ಬ ಮಾನವನ ವ್ಯಕ್ತಿತ್ವ ತನ್ನನ್ನು ತಾನು ಚಿರಸ್ಮರಣೀಯ ಮಾಡಿಕೊಳ್ಳುವ ಪ್ರಯತ್ನವನ್ನು ಈ ಬಗೆಯಲ್ಲಿನ ಸಾಹಿತ್ಯದಲ್ಲಿ ನಾವು ಗುರುತಿಸಬಹುದು. ಹಾಗೆಯೇ ಇದೇ ನೆಲೆ ಮತ್ತು ಹಿನ್ನೆಲೆಯಲ್ಲಿ ಪ್ರಸ್ತುತ. ಕೆ. ಗೋವಿಂದರಾಜು ಅವರು ಬರೆದಿರುವಂತಹ 'ಮನವಿಲ್ಲದವರ ಮಧ್ಯೆ' ಎಂಬುದು ಆತ್ಮಕಥೆಗಳಲ್ಲಿಯೇ ಒಂದು ವಿಶಿಷ್ಟ ಆತ್ಮಕಥೆಯೇ ಆಗಿರುತ್ತದೆ. ಇದು ಇತರೆ ಆತ್ಮಕಥೆಗಳಿಗಿಂತಲೂ ಬೇರೆ ಶೈಲಿಯಲ್ಲಿನ ವಿಭಿನ್ನತೆ ನೆಲೆಯನ್ನು ಹೊಂದಿದೆ. ಏಕೆಂದರೆ, ಇಲ್ಲಿ ಕೆ.ಗೋವಿಂದರಾಜು ಅವರು ಕೇಂದ್ರ ಬಿಂದುವೇ ಆಗಿದ್ದಾರೆ. ಇದರಲ್ಲಿ ತನ್ನ ಪರಿಸರದ ಸುತ್ತಮುತ್ತಲ್ಲಿನ ಜನಸಮುದಾಯದ ನಡುವಿನ ಪರ ಮತ್ತು ವಿರೋಧದ ಮನಸ್ಥಿಯ ಸಂಕೀರ್ಣ ಚಿತ್ತಾರವಿರುವ ಒಂದು ಕೃತಿಯೇ ಆಗಿದೆ ಎಂದು ಹೇಳಬಹುದು. ಹಾಗೆಯೇ ಇದರಲ್ಲಿ ಒಂದು ಭಿನ್ನ ಮನಸ್ಥಿತಿಯ ಲೋಕದ ವಿಸ್ತಾರವನ್ನು ತೆರೆದು ವಿವೇಚಿಸುವಂತೆ ಮಾಡುವ ಚಿತ್ರಣವೂ ಸಹ ಇದರಲ್ಲಿದೆ. ಈ ಆತ್ಮಕಥೆಯ ಆರಂಭವೇ ಲೇಖಕರು ತಮ್ಮ ತಾಯಿಯ ಕುಟುಂಬವನ್ನು ಸ್ವತಃ ನಿಶ್ಚಿತ ಮತ್ತು ಸುಭದ್ರವಾದ ರೀತಿಯಲ್ಲಿ ಕಟ್ಟಿಕೊಳ್ಳುವ ಸಂಗತಿಗಳಿವೆ. ಆದರೆ, ತಂದೆಯೂ ಮೊದಲಲ್ಲಿ ಅಷ್ಟು seriousness ಇಲ್ಲದಿದ್ದರೂ ಸಹ ಕಾಲಕ್ರಮೇಣ ಸ್ಥಳೀಯವಾಗಿ ಶಾಸ್ತ್ರ, ಮಂತ್ರ, ತಂತ್ರದಂತಹ ಪ್ರಯೋಗಗಳಿಂದಲೇ ತಮ್ಮ ಸುತ್ತಲಿನ ಜನಸಮುದಾಯದವರಿಗೆ ಅನುಕೂಲವಾಗಿ

[1].ಸಂಶೋಧನಾ ವಿದ್ಯಾರ್ಥಿ, ಕನ್ನಡ ವಿಭಾಗ, ಮಹಾರಾಜ ಕಾಲೇಜು, ಮೈಸೂರು
[2].ಪ್ರಾಧ್ಯಾಪಕರು, ಕನ್ನಡ ವಿಭಾಗ, ಮಹಾರಾಜ ಕಾಲೇಜು, ಮೈಸೂರು

ಅನೇಕರ ಒತ್ತಾಸೆಯ ದೆಸೆಯಿಂದ ಸಂಸಾರದಲ್ಲಿ ಗಟ್ಟಿಯಾಗಿ ನೆಲೆ ನಿಲ್ಲುವ ಚಿತ್ರಣ ಪ್ರಮುಖವಾಗಿಯೇ ಕಂಡುಬರುತ್ತದೆ ಎಂದು ಹೇಳಬಹುದು.

ಬದುಕಿನ ಬೆಂಕಿ ಮೈ ಮನಗಳನ್ನು ಬೇರೆ ಬೇರೆ ರೂಪಗಳಲ್ಲಿ ಸುಡುತ್ತಿರುತ್ತದೆ. ಅಚಾನಕ್ ಆಗಿ ಬರಸೆಳೆದುಕೊಂಡು ಜೀವ ತತ್ತರಿಸಿ, ನೋವು, ಅಪಮಾನ, ಅನುಭವಿಸಿದ ತಲ್ಲಣ, ಸಮಾಜದ ತಿರಸ್ಕಾರ, ಹೇಗಾದರೂ ಹೊರಬರಬೇಕು ಎನ್ನುವ ಛಲ. ತನ್ನ ಬೇಕು ಬೇಡಗಳಿಂದ ಪ್ರಭಾವಿತರಾಗದೇ ವಿಶೇಷ ಭಾವೋದ್ವೇಗಕ್ಕೆ ಒಳಗಾಗದೇ ಜೀವನಕ್ಕೆ ಸಂಬಂಧಿಸಿದ ಘಟನೆಗಳನ್ನು ನಿರೂಪಿಸುವ ಸಂಯಮ ರೂಢಿಸಿಕೊಳ್ಳುವುದು ಒಂದು ಸವಾಲೇ ಸರಿ. ಹೀಗೆ, ಲೇಖಕರಾದಂತಹ ಕೆ.ಗೋವಿಂದರಾಜು ಅವರ ಜೀವನವು ಸರಳ ಹಾಗೂ ಸುಗಮವಾಗಿ ನಡೆಯಬೇಕಿದ್ದದು, ಅನೀರಿಕ್ಷಿತವಾಗಿ ದಿಕ್ಕುತಪ್ಪಿ ನಡೆದ ಕೃತ್ಯಕ್ಕೆ ಗುರಿಯಾಗಿ, ಕಾನೂನಿನ ಅಡಿಯಲ್ಲಿ ಅಪರಾಧಿಯಾಗಿ ಇರಬೇಕಾದ ಸಂದರ್ಭ ಆಗೇ ಹೋಯಿತು. ಬದುಕು ಅಲ್ಲೋಲ ಕಲ್ಲೋಲವಾಗಿ ಜೀವನ ಬಿರುಗಾಳಿಗೆ ಸಿಕ್ಕ ತರಗೆಲೆಯಂತೆ ದಾರಿ ಕಾಣದಂತಾಗಿತ್ತು. ಇಂತಹ ಬರಸಿಡಿಲ ಬಡಿತದಿಂದ ಹಾರಿತು ಜೀವ ಎನ್ನುವಂತಹ ನೋವುಗಳಿಗೆ ಕೊನೆಗೊಮ್ಮೆ ಪರಿಹಾರವಾಗಿ ಪಂಜರದ ಬಂಧಿ ಜೀವನದಿಂದ ಬಿಡುಗಡೆಯಾಯಿತು. ಹೇಗೋ ಏನೋ ಖುಲಾಸೆಯಾಗಿ ಬದುಕಿನಲ್ಲಿ ಹೊಸಬೆಳಕು ಮೂಡಿ ಸಮಾಜದ ಮುನ್ನೆಲೆಗೆ ಬಂದರೂ ಕೂಡ ಬದುಕಿನಲ್ಲಿ ಬಿದ್ದ ಹೊಡೆತಕ್ಕೆ ಸುಧಾರಿಸಿಕೊಳ್ಳಲು ತೆಗೆದುಕೊಂಡ ಸಮಯ ಕಡಿಮೆಯೇನಲ್ಲ. ಇಂತಹ ಜೀವನದ ಏಳುಬೀಳುಗಳು ಮೈಮನದ ಆತಂಕ, ಹತಾಶೆ, ಸಂಕಟ, ತಿರಸ್ಕಾರ, ಇಂತಹ ಘಟನೆಗಳು, ವಿಮರ್ಶಾ ದೃಷ್ಟಿಗಳಿಂದ ಮೆಚ್ಚುಗೆ ಪಡೆದರು. ಜ್ವಾಲಮುಖಿಯಂತೆ ಒಡಲಿನಲ್ಲಿ ಉಕ್ಕುವ ದುಗುಡವನ್ನು, ಕುದಿಯುತ್ತಿದ್ದ ಭಾವನೆಗಳನ್ನು ಹೊರಹಾಕಲು ಆಯ್ಕೆ ಮಾಡಿಕೊಂಡು ಸಾಂಸ್ಕೃತಿಕ ಚರಿತ್ರೆಯಾಗಿಸಿದರು. ಮೈಸೂರು ಮಹಾನಗರದ ಬಡಾವಣೆಗಳಲ್ಲಿ ಒಂದಾಗಿರುವಂತಹ ಅಶೋಕಪುರಂನಲ್ಲಿ ಮನೆ ಮನೆಗಳ ನಡುವೆ ಬದುಕುತ್ತಿರುವಾಗ ಅನಿರೀಕ್ಷಿತ ಘಟನೆಯೊಂದು ನಡೆಯಿತು. ಅನಂತರ ತಿಳಿದ ಸತ್ಯ ಮಾನವೀಯತೆಯ ಮನಸ್ಸು ಇಲ್ಲದವರ ನಡುವೆ ಬದುಕುತ್ತಿರುವೆ ಎಂದು ತಿಳಿದಾಗ ಬರೆದಂತಹ ಆತ್ಮಕಥೆಯೇ ಈ ಮನವಿಲ್ಲದವರ ಮಧ್ಯೆ ಎಂಬುದೇ ಆಗಿರುತ್ತದೆ. ಈ ಆತ್ಮಕಥೆಯು ತನ್ನ ಜೀವನದ ನೆನಪುಗಳನ್ನು ಮೆಲುಕು ಹಾಕುವ ಸಲುವಾಗಿ ಕಹಿ ನೆನಪುಗಳನ್ನು ಹೊರೆಯನ್ನು ಕಳೆದುಕೊಳ್ಳುವುದಕ್ಕಾಗಿ ಜೀವನದ ನೈಜ ಚಿತ್ರಣವನ್ನು ತೆರೆದಿಡುತ್ತದೆ. ಜೀವನದಲ್ಲಿ ಭೀಕರತೆಯನ್ನು ಬಿಚ್ಚಿಟ್ಟ ಕೃತಿ ಇದಾಗಿದೆ. ತುಚ್ಛವಾಗಿ ಕಂಡ ಸಮಾಜವನ್ನು ಎದುರಿಸಿ ಪುಟಿದೇಳುವ ಇವರ ಚೈತನ್ಯ ಶ್ಲಾಘನೀಯವೇ ಆಗಿರುತ್ತದೆ ಎಂದು ಹೇಳಬಹುದು.

ಎಲ್.ಎಸ್.ಶೇಷಗಿರಿರಾವ್ ಅವರು ಹೇಳುತ್ತಾರೆ. "ಜೀವ ನಡುಗಿಸುವಂತೆ ಮಾಡುವ ಅನುಭವದ ಬೆಂಕಿಯಿಂದ ಮೂಡಿಬಂದ ಆತ್ಮವೃತ್ತವೇ ಆಗಿರುತ್ತದೆ." ಆರಂಭದಲ್ಲೇ ಇದೇ ಎಲ್.ಎಸ್.ಶೇಷಗಿರಿರಾವ್

ಅವರ ಮಾತನ್ನು ಸ್ಮರಿಸುತ್ತಾ; ಒಬ್ಬ ವ್ಯಕ್ತಿಯ ಜೀವನವು ಸಂದರ್ಭಕ್ಕೆ ಅನುಸಾರವಾಗಿ ಬದಲಾಗುವುದು ಒಂದು ಸಹಜ ಪ್ರಕ್ರಿಯೇ ಆಗಿರುತ್ತದೆ. ತಾನು ಬಕುವ ಸಮುದಾಯದ ಜನರ ದಿನನಿತ್ಯದ ಬದುಕನ್ನು ಕಣ್ಣಾರೆ ಕಂಡುಂಡ ಜೀವನದ ಸ್ಥಿತಿಗತಿಯನ್ನು ಇದರಲ್ಲಿ ಪ್ರಾಮಾಣೀಕವಾಗಿ ದಾಖಲಿಸಿದ್ದಾರೆ ಎಂಬುದು ಕಂಡುಬರುತ್ತದೆ. ಒಂದು ಹೊತ್ತಿನ ಊಟಕ್ಕೂ ಕಷ್ಟ ಪಡುವ ಶ್ರಮಿಕ ವರ್ಗವನ್ನು ಬೆವರಿನ ಹನಿಯ ಮೌಲ್ಯವನ್ನು ಹೇಳಲಿಚ್ಛಿದ್ದಾರೆ. ಕನ್ನಡನಾಡು ಮತ್ತು ಕನ್ನಡ ಸಾಹಿತ್ಯದಲ್ಲಿಯೇ ಒಂದು ಬಹುದೊಡ್ಡ ಚಳುವಳಿಯಾದ ಬೂಸಾ ಪ್ರಕರಣವನ್ನು ವಿದ್ಯಾರ್ಥಿ ಹಂತದಲ್ಲೇ ಹತ್ತಿರದಿಂದ ನೋಡಿದವರಾಗಿದ್ದಾರೆ. ಈ ಬೂಸಾ ಚಳುವಳಿಯ ವಿದ್ಯಾಮಾನಗಳು ಮೈಸೂರಿನಲ್ಲಿ ಜರುಗಿದ ಪ್ರಕರಣದ ತೀವ್ರತೆಯನ್ನು ಶಾರದಾ ವಿಲಾಸ ಕಾಲೇಜಿನಲ್ಲಿ ಓದುತ್ತಿದ್ದಾಗ social conflictನಲ್ಲಿ ಭಾಗಿಯಾಗಿದ್ದರು. ದಲಿತ ಚಳುವಳಿ, ಮಹಾನಾಯಕ ಅಂಬೇಡ್ಕರ್ ಅವರ ಹೋರಾಟದ ಹಾದಿ ಇವರಿಗೆ ವಿದ್ಯಾರ್ಥಿ ದೆಸೆಯಿಂದಲೇ ಮಾನಸಿಕವಾದ ಸ್ಥೈರ್ಯ ಇವರನ್ನು ಒಳಹೊಕ್ಕಿತು. ಈ ಹೋರಾಟಗಳು social justies ಪರವಾಗಿ ಅಸಮಾನತೆಯ ವಿರುದ್ಧ ದನಿ ಎತ್ತಿ ಹೇಗೆ ಪರಿಸರ ನಿರ್ಮಾಣ ಮಾಡಿಕೊಳ್ಳಬೇಕು ಎಂಬ ಮನೋಬಲವನ್ನು ಬೆಳೆಯುವ ಹಂತದಲ್ಲೇ ಹಂತ ಹಂತವಾಗಿ ಗಟ್ಟಿಯಾಗುತ್ತಿರುವುದನ್ನು ಈ ಆತ್ಮಕಥೆಯಲ್ಲಿ ಗುರುತಿಬಹುದು.

ಸತ್ತರೆ ಇಲ್ಲೇ ಸಾಯೋಣ. ನಮ್ಮ ಸತ್ಯ ನಮ್ಮೊಳಗೆ ಇದ್ದರೆ, ಆ ದೇವರು ಎನ್ನುವವ ಸತ್ಯದ ಪರವಾಗಿ ಇದ್ದರೆ, ನಮ್ಮ ಬಿಡುಗಡೆಯಗಲಿ, ಇಲ್ಲದಿದ್ದರೆ ಬೇಡ. ನಾವೂ ಇದುವರೆಗೂ ಯಾರಿಗೂ ಅನ್ಯಾಯ ಮಾಡದಿದ್ದರೂ, ಜನ ನಮಗೆ ಅನ್ಯಾಯ ಮಾಡಿದರು ಎಂದಾದರೂ ಒಂದು ದಿನ ಅಡಗಿರುವ ಸತ್ಯ ಹೊರಬರಲೇಬೇಕು. ನಮ್ಮ ಮನೆ ಮುರಿದವರು, ಮನಸ್ಸುಗಳನ್ನು ಧ್ವಂಸಗೊಳಿಸಿದವರು ನಿಜದ ನೆಲೆಯಲ್ಲಿ ಅನಾವರಣಗೊಳ್ಳಬೇಕು ಎನ್ನುವ ದೂರದೃಷ್ಟಿಯ ಚಿಂತನೆಯನ್ನು ಒಳಗೊಂಡು ಸೆರೆಮನೆಯ ಕಂಬಿಗಳ ನಡುವೆ ಕಾಲ ಕಳೆಯುತ್ತಾರೆ.

ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಮೈಸೂರಿನ ಮುಖ್ಯ ಶಾಖೆಯಲ್ಲಿ ಉದ್ಯೋಗಕ್ಕೆ ಸೇರಿದಾಗ ಇವರ ಬದುಕಿನ ಕಡುಕಷ್ಟಗಳ ದಿನಗಳು ಮುಗಿದು ಬದುಕು ಹಸಿರಾಯಿತು ಎಂಬ ಭರವಸೆಯಿತ್ತು. ಈ ಸಮಯದಲ್ಲಿ ಜೀವನ ಸುಖಕರವಾಗಿ ನಡೆಯುವಷ್ಟು ಸಬಲತೆ, ಕುಟುಂಬ ನಿರ್ವಹಣೆ ಎಲ್ಲವೂ ಸಾಗುತಿತ್ತು. ಇಲ್ಲೂ ಕೂಡ ಅಸ್ಪೃಶ್ಯತೆಯ ಅನುಭವವನ್ನು ಹೇಳುತ್ತಾರೆ. ಬ್ಯಾಂಕಿನಲ್ಲಿ ಕೆಲಸ ನಿರ್ವಹಿಸುವವರಿಗೆ ಮಾತ್ರ ಮೇಲು ಕೀಳು. ಆದರೆ ಅದೇ ಬ್ಯಾಂಕಿನಲ್ಲಿ ಓಡಾಡುವ ದುಡ್ಡಿಗೆ ಯಾವ ಜಾತಿ ನೀತಿ ರೀತಿ ಯಾವುದೂ ಇಲ್ಲ ಎಲ್ಲವೂ ಒಂದೇ. ಎಲ್ಲವೂ ಒಂದೇ ಬೆಲೆ, ಮೌಲ್ಯ. ಜೀವವಿರುವ ಮಾನವೀಯತೆಯೆಲ್ಲಿ, ನಿಶ್ಚೇತನವಾಗಿರುವ ಹಣದ ಬೆಲೆಯ ಮೌಲ್ಯಕ್ಕೆ ನೀಡುವ ಸಮಾಜದ ಪ್ರಧಾನ್ಯತೆಯು, ಚೈತನ್ಯವಾಗಿರುವ ಜೀವಕ್ಕೆ ರಾಕ್ಷಸರಂತೆ ಕಾಣುವ ಬಗೆಗೆ ಹೆಚ್ಚಿನ ಆಕ್ರೋಶವನ್ನು

ವ್ಯಕ್ತಪಡಿಸಿದ್ದಾರೆ. ಈಗಿರುವಾಗ ಒಳ್ಳೆಯ ಕೆಲಸ, ಕೈತುಂಬ ಸಂಬಳ, ಮನೆಯಲೆಲ್ಲಾ ತುಂಬು ಬಳಗ. ಮದುವೆಗೆ ವಯಸ್ಸು ಹೇಳಿ ಮಾಡಿಸುವಂಥದ್ದು ಇವರ ತಂದೆಯವರು, ಗೊತ್ತು ಮಾಡಿದ ಹುಡುಗಿಯ ಪಂಚಾಂಗವನ್ನು ನೋಡಿದಾಗ; 'ಲೋ ಗೋವಿಂದು ನೀನು ಮದುವೆಯಾಗೋ ಈ ಹುಡುಗಿ ಜೀವನ ಪೂರ್ತಿ ನಿನ್ನೊಂದಿಗೆ ಬಾಳೊಲ್ಲ. ಏನಿದ್ರು ಒಂದು ವರ್ಷ ನಿನ್ ಜೊತೆಗಿದ್ರೆ ಅದೇ ಹೆಚ್ಚು' ಎಂದಿದ್ದರಂತೆ. ಆದರೆ, ಯಾವ ಶಾಸ್ತ್ರ, ಪುರಾಣ, ಜಾತಕ, ಪಂಚಾಂಗದ ಜೊತೆಗೆ ಹಿರಿಯರ ಮಾತನ್ನು ಕೇಳುವ ಸೈರಣೆಯಾಗಲಿ ಆಥವಾ ತಾಳ್ಮೆಯಾಗಲಿ ಇರಲಿಲ್ಲ. ಗೊಡ್ಡು ಆಚಾರಗಳಿಗೆ ನಾನು ಪಡೆದ ವಿದ್ಯೆ, ಬುದ್ಧಿ, ಉದ್ಯೋಗ, ಇವೆಲ್ಲದರ ನಂಬಿಕೆಯಿಂದ ಮುಂದೆ ಆಗುವ ಅನಾಹುತವನ್ನಾಗಲಿ ಅದೃಷ್ಟವನ್ನಾಗಲಿ ಕಂಡವರು ಯಾರು ನಾನು ಅವಳನ್ನು ಮದುವೆ ಆಗೇ ಆಗುತ್ತೇನೆ. ಗಣ ಕೂಟವನ್ನು ನಾನು ನೋಡುವುದಿಲ್ಲ. ಏನಿದ್ದರೂ ಗುಣ ಕೂಟ ನೋಡುವವ ಎಂದು ಹರಿತವಾದ ಸ್ವಭಾವದೊಂದಿಗೆ, ಹಳೆಯ ಕಂದಚಾರಗಳನ್ನು ಮೂಢನಂಬಿಕೆಗಳನ್ನು ತೊಡೆದು ಹಾಕಬೇಕು ಎಂಬ ಪ್ರಗತಿಪರ ಚಿಂತನೆಯತ್ತ ಮಾತನಾಡುತ್ತಾ ತಮ್ಮ ಹಠಮಾರಿತನದಿಂದ ಪ್ರತಿರೋಧದ ನಡುವೆಯೂ ಸುಶೀಲಳ ಜೊತೆ ಮದುವೆ ಮಾಡಿಕೊಂಡರು. ಮದುವೆಯಾದ ಹೊಸದರಲ್ಲಿ ಎರಡು ಕುಟುಂಬಗಳು ಬಹಳ ಅನ್ಯೋನ್ಯವಾಗಿ ಸಂತಸದಿಂದ ಕೆಲವೇ ಕೆಲವು ದಿನಗಳು ಕಳೆಯುತ್ತಿರುತ್ತದೆ. ಈಗಿರುವಾಗ ಸುಶೀಲ ತವರು ಮನೆಗೆ ಹೊತ್ತು ಗೊತ್ತು ಇಲ್ಲದೇ ಹೋಗಿ ಬರುವುದು ಸರ್ವೆ ಸಾಮಾನ್ಯವಾಗಿ ಬಿಡುತ್ತದೆ. ಹೀಗೆ ಒಂದಲ್ಲ ಒಂದು ದಿನ ಸುಶೀಲಳ ನಡಾವಳಿಕೆಯಲ್ಲಿ ತೀವ್ರತರವಾದ ಬದಲಾವಣೆಯನ್ನು ಕಾಣುತ್ತಾರೆ. ಇದನ್ನು ಭದ್ರಪಡಿಸಲು ಹೋದಾಗ ಕೈಮೀರಿ ಅನಿರೀಕ್ಷಿತವಾಗಿ ನಡೆದ ಘಟನೆ ಸುಶೀಲಾ ಎಂಬ ಹೆಣ್ಣಿನ ಸಾವು. ಇದು ಇಡೀ ಕುಟುಂಬವನ್ನು ಸ್ತಂಭಿಭೂತರನ್ನಾಗಿಸುತ್ತದೆ. ಸಂಬಂಧಗಳು ಛಿದ್ರವಾಗಿ ಮತ್ತೆ ಅದೇ ಗಟ್ಟಿತನದೊಂದಿಗೆ ಬೆಸೆಯಲಾರದಷ್ಟು ಅಪಾರವಾದ ಪರಿಣಾಮ ಈ ಅಚಾನಕ್ ಸಾವಿನಿಂದ ಕುಸಿದು ಹೋಗುತ್ತಾರೆ. ಈ ಘಟನೆ ಕಾನೂನಿಡಿಯಲ್ಲಿ ಪ್ರಕರಣ ದಾಖಲಾಗುತ್ತದೆ. ಅವಮಾನ, ನೋವು ಮಾನಸಿಕ ಖಿನ್ನತೆ ,ಕೌಟುಂಬಿಕ ಬಿರುಕು. ಜನರ ತಿರಸ್ಕಾರ, ಭಯ. ಬಳಲಿಕೆ ಎಲ್ಲವೂ ಎರಗಿದರೆ ಹೇಗೆ? ಸಹಿಸಿಕೊಳ್ಳಬೇಕೆಂಬ ದಾರಿ ಕಾಣುತ್ತಿಲ್ಲ. ಕೇಸ್ ದಾಖಲು, ಪೋಲಿಸ್ ಸ್ಟೇಷನ್, ಪೋಲಿಸ್ ಕೈರುಚಿ, ಕೋರ್ಟ್, ಸೆರೆವಾಸ, ವಕೀಲರು ಇವೆಲ್ಲವೂ ಒಬ್ಬ ಸಾಮಾನ್ಯ ಮನುಷ್ಯನ ಬದುಕಿನಲ್ಲಿ ಜೀವನನ್ನು ತಿಣುಕಾಡಿ ಅಲೆಯುವಂತೆ ಮಾಡುತ್ತದೆ. ಸುಖ, ಶಾಂತಿ, ನೆಮ್ಮದಿ, ಅನುರಾಗ ಸಂಬಂಧದಿಂದ ನವಿರಾದ ಜೀವನವನ್ನು ಕಟ್ಟಿಕೊಂಡು ಮಾದರಿಯಾಗಬೇಕಾದ ಜೀವನ, ಮೂರಾಬಟ್ಟೆಯಾಗಿ ಬದುಕು ಬೀದಿಪಾಲಾಗಿ ಬದುಕಿನ ಸಾರ್ಥಕ ದಿನಗಳನ್ನು ಸೆರೆವಾಸದಲ್ಲಿ ಕಳೆಯುವಂತಾಯಿತು. ಪೋಲಿಸ್ ಸ್ಟೇಷನ್‌ನಲ್ಲಿ ಇವರನ್ನು ನಡೆಸಿಕೊಂಡ ಪರಿ ಭಯ ಹುಟ್ಟಿಸುತ್ತದೆ. ಪ್ರೀತಿಯ ಒಲುಮೆಯಿಂದ ಕೂಡಿ ಬಾಳಬೇಕಾದ ದಾಂಪತ್ಯ ಜೀವನ ಉರಿದು ಬದುಕನ್ನೇ ಸುಟ್ಟು ಬೂದಿ ಮಾಡಿತು. ಇಲ್ಲಿ ಇವರಿಬ್ಬರ

ನಡುವೆ ಹೊಸತರಲ್ಲಿ ಎಲ್ಲವೂ ಚೆನ್ನಾಗಿತ್ತು. ಆದರೆ ಮುಂದೆ ದಿನಗಳು ಉರುಳುತ್ತಾ ಮಾತುಗಳು ಪೂರ್ವ ಪಶ್ಚಿಮವಾದವು. ತಮ್ಮ ಸ್ವ–ನಿರ್ಧಾರಗಳ ತಳಹದಿಯ ಮೇಲೆ ನಿಂತು ಅಮೂಲ್ಯವಾದ ದಾಂಪತ್ಯ ಬದುಕನ್ನು ಆರಂಭದಲ್ಲೇ ಕಳೆದುಕೊಂಡರು. ಯಾತನಮಯವಾದ ವೇದನೆಯನ್ನು ಅನುಭವಿಸಿದ ಒಬ್ಬ ಬರಹಗಾರನ ಜೀವನದ ಬಾಳ್ಕಥನ ಇದಾಗಿದೆ.

ಈ ಸಾವಿನ ಪ್ರಕರಣದಿಂದ ಜೈಲು ಶಿಕ್ಷೆ ನಿಗದಿಯಾಗುತ್ತದೆ. ಜೈಲಿನ ವ್ಯವಸ್ಥೆ ಬಗೆಗೆ ಸುದೀರ್ಘವಾಗಿ ತಿಳಿಸುತ್ತಾರೆ. ಇಲ್ಲಿಯ ರೀತಿ ನೀತಿಗಳು ಪದ್ಧತಿಗಳು, ವಿಚಾರಣೆ, ಖೈದಿಗಳು, ಜೀವಾವಧಿ ಶಿಕ್ಷೆ ಮುಂತಾದ ವಿಚಾರಗಳು ಹೇಗೆಂದರೆ; ಕಾಡಿನ ಸ್ವಚ್ಛಂದತೆಗೂ ಕಬ್ಬಿಣದ ಸರಳುಗಳ ಹಿಂದೆ ಸುತ್ತಾಡುವ ಹುಲಿ ಸಿಂಹಗಳ ಅಸಹಜ ಚಲನೆಗಳಂತೆ ಗೋಚರವಾಗುತ್ತದೆ. ಅಲ್ಲಿನ ಜೈಲುವಾಸಿಗಳ ದಿನಚರಿಯನ್ನು ನೋಡಿದರೆ; ಒಳಗಿನ ಪ್ರಪಂಚವು ಎಷ್ಟೊಂದು ಭೀಕರ ಭಯಾನಕತೆಯನ್ನು ಉಂಟು ಮಾಡುತ್ತದೆ. ಜೀವನವು ಎಷ್ಟೊಂದು ಚಿತ್ರಹಿಂಸೆಯ ಗಣಿಯಾಗಿದೆ. ಕಾನೂನಿನಡಿಯಲ್ಲಿ ಬದುಕುವಾಗ ಸಾಮಾಜಿಕ ಸ್ವಾಸ್ಥ್ಯವನ್ನು ಕಾಪಾಡುವುದಕ್ಕಾಗಿ ಈ ರೀತಿಯ ಭೀಕರ ಪ್ರಪಂಚವೂ ಅನಿವಾರ್ಯ ಎನಿಸುತ್ತದೆ. ಮನುಷ್ಯನ ಸಹಜ ಸ್ವಭಾವವೇ ಹಾಗೇ ಯಾವಾಗ ನಿಯಂತ್ರಣ, ಭಯ, ರೀತಿ ನೀತಿಗಳಿಂದ ದೂರವಾದಾಗ ಮನಸ್ಸಿನ ಮತ್ತೊಂದು ಮುಖ ಮಾತನಾಡಲು ಪ್ರಾರಂಭಿಸುತ್ತದೆ. ಇಲ್ಲಿ ಎಲ್ಲರೂ ಅಪರಾಧಿಗಳೇ ಮಾನಸಿಕವಾಗಿ ನಾವೂ ನಿರಾಪರಾಧಿಗಳು. ಸಾಂದರ್ಭಿಕವಶಾತ್ ಇಲ್ಲಿದ್ದೇವೆ. ಒಂದಲ್ಲ ಒಂದು ದಿನ untie ನಮ್ಮದಾಗುತ್ತದೆ ಎಂಬ ಭರವಸೆಯ ಹೊಸ ಬೆಳಕಿನೊಂದಿಗೆ ಕಾತರಿಸುವ ಮನಸುಗಳು. ಸೆರೆ ಒಳಗಿನ ಪ್ರಪಂಚ ಸಂಬಂಧಗಳನ್ನು ದೂರ ಮಾಡಿ ಏಕಾಂಗಿಯಾಗಿ ಕಾಡುವ ಅನಾಥ ಪ್ರಜ್ಞೆ, ಒಂದು ಕ್ಷಣ ಕೋಪವನ್ನು ನುಂಗಿ ಬಿಡಬೇಕಾಗಿತ್ತು. ಆಗ ನನ್ನಿಂದ ಈ ತಪ್ಪು ನಡೆಯುತ್ತಿರಲಿಲ್ಲ ಎನ್ನುವ ಅದೆಷ್ಟೊ ವ್ಯಕ್ತಿಗಳ ಪಾಲಿಗೆ ಸಮಯವೇ ಯಮನಾಗಿ ಬಂದು ಕಾಲಾವಶದಲ್ಲಿ ಬಂಧೀಯಾಗಿಸಿದೆ ಎಂದು ಮಮ್ಮಲ ಕೊರಗಿ ಮರುಗುವ ಸೆರೆವಾಸಿಗಳು. ಇದರಿಂದ ಊರು, ಕೇರಿ, ಹೆಂಡತಿ ಮಕ್ಕಳು, ಸಂಸಾರ, ಸಂಬಂಧಗಳು, ಸಂಘ ಸಹವಾಸದಿಂದ ಮನುಷ್ಯ ದೂರವಾಗುತ್ತಾನೆ. ಅದರ ಮೌಲ್ಯವನ್ನು ಪಡೆದುಕೊಳ್ಳಲು ಈ ಸೆರೆವಾಸದಿಂದ ಬಿಡುಗಡೆಯಾದರೂ ನೋಡುವ ದೃಷ್ಟಿಕೋನ ಬೇರೆಯೇ ಆಗಿರುತ್ತದೆ ಎಂಬುದು ಇದರಲ್ಲಿ ಸಾದರಗೊಂಡಿರುತ್ತದೆ. ಸಾಮಾಜಿಕವಾಗಿ ವ್ಯಕ್ತಿಯು ಅಗೌರವಕ್ಕೆ ಪಾತ್ರನಾದರೆ ಅ ವ್ಯಕ್ತಿಯ ಬದುಕು ಹೇಗೆ ಆಡಿಕೊಳ್ಳುವವರ ಬಾಯಿಗೆ ಆಹಾರವಾಗುತ್ತದೆ ಎಂಬುದಕ್ಕೆ ಇಲ್ಲಿ ಅನೇಕ ರೀತಿಯ ನಿದರ್ಶನಗಳಿವೆ. ಹಾಗೆಯೇ ಇಂತಹ ಎಲ್ಲ ಪ್ರಶ್ನೆಗಳಿಗೂ, ತೊಂದರೆಗಳಿಗೂ ಒಂದಲ್ಲ ಒಂದು ರೀತಿಯ suggestions ಇದ್ದೇ ಇರುತ್ತವೆ. ಅಂತಹದ್ದರಲ್ಲಿ ಇಂತಹ ಆತ್ಮಕಥೆಗಳನ್ನು ಓದಿದಾಗ ಇದು ನಿಜವಾಗಿಯೂ ನಡೆಯಿತೋ ಅಥವಾ ಕಲ್ಪನೆಯೋ ಎಂದು ಭಾಸವಾಗುತ್ತದೆ. ಇದರಲ್ಲಿ ಬಾಲ್ಯ ಜೀವನ, ಶಿಕ್ಷಣ, ಕುಟುಂಬ, ಉದ್ಯೋಗ, ವೈವಾಹಿಕ ಜೀವನ ಇವು

ಸುಖದ ಹಂತಗಳು. ಪೋಲಿಸ್, ಕೋರ್ಟ್, ಸೆರೆ, ಖುಲಾಸೆ ಇತ್ಯಾದಿಗಳೆಲ್ಲವೂ ಮನುಷ್ಯನನ್ನು ಕಮರುವಂತೆ ಮಾಡುತ್ತದೆ. ಜೀವನ ಜಿಗುಪ್ಸೆಗೊಂಡು ಚೈತನ್ಯವಿಲ್ಲದಂತೆ ಶಕ್ತಿ ವ್ಯಯಿಸಿ ಹೋದಾಗ ಪುಟಿದೇಳುವುದು ಅವನ ಆತ್ಮಸ್ಥೈರ್ಯ ಅಂತರಂಗದ ಮನೋಬಲದಿಂದಲ್ಲವೇ? ಮಾಡುವ ಸಕರಾತ್ಮಕ ಸಾಮಾಜಿಕ ಚಿಂತನೆಯಿಂದ ಮಾತ್ರ ಸಾಧ್ಯ. ಈ ರೀತಿಯ ಸಂಕಟ, ದುಃಖ ದುಮ್ಮಾನಗಳನ್ನು ಅನುಭವಿಸಿಕೊಂಡು ಬದುಕಿದ ವ್ಯಕ್ತಿ 2020ರ ಕರ್ನಾಟಕ ಅಕಾಡೆಮಿ ಸಾಹಿತ್ಯ ಪ್ರಶಸ್ತಿ ಲಭಿಸುವ ತನಕ ಸಾಧನೆ ಮಾಡಿದ್ದಾರೆ. ಈ ರೀತಿಯ ಬೆಳವಣಿಗೆಯನ್ನು ನೋಡಿದಾಗ; ಮನುಷ್ಯನಿಗೆ ಎಷ್ಟೇ ಅಡ್ಡಿ ಆತಂಕಗಳು ತೊಂದರೆಗಳು ಎದುರಾದರೂ ಅವನ ಚೈತನ್ಯದ ಮುಂದೆ ಎಲ್ಲವೂ ಗೌಣವಾಗುತ್ತದೆ. ಎಂಬುದಕ್ಕೆ ಈ ಮನವಿಲ್ಲದವರ ಮಧ್ಯೆ ಆತ್ಮಕಥೆ ಸ್ಪೂರ್ತಿದಾಯಕವಾದದ್ದು. ಸುಶೀಲಳ ಜೀವಂತ ಪಾತ್ರಕ್ಕೆ ಒಂದು ಮಾತು, ಯಾವ ಸಂದರ್ಭದಲ್ಲಾದರೂ ಸರಿ ಈ ರೀತಿಯ ಅಮಾನುಷ ಕೃತ್ಯಕ್ಕೆ ಕೈಹಾಕಿ ಇಡೀ ಕುಟುಂಬವನ್ನು ಅಲುಗಾಡಿಸಿ ದಾರವಿಲ್ಲದ ಗಾಳಿಪಟದಂತಾಯಿತು. ಚಂದ ಇದ್ದ ಬದುಕನ್ನು ಚದುರಿಸಿ ಬದುಕನ್ನು ವಿನಾಶದತ್ತ ಕೊಂಡೊಯ್ದು ದೇಹ ಮನಸ್ಸುಗಳನ್ನು ಸುಟ್ಟು ಬೂದಿಯಾಗಿಸಿತು. ಆದರೆ ಪ್ರೀತಿಯ ಭಾವನೆಗಳು, ನೆನಪುಗಳು ಸದಾ ಹಸಿರು. ಬದುಕಿನಲ್ಲಿ ವಿಶ್ವಾಸವೇ ಉಳಿದಿರಲಿಲ್ಲ. ಬಿಡುಗಡೆಯಾಗುವ ಎಲ್ಲಾ ಬಾಗಿಲುಗಳು ಮುಚ್ಚಿ ಹೋಗಿವೆ ಎಂದು ಅನ್ನಿಸುತ್ತದೆ. ಆತ್ಮಹತ್ಯೆಗೂ ಪ್ರಯತ್ನ ಮಾಡಿದರೂ  ಫಲಿಸಲಿಲ್ಲ. ಭವಿಷ್ಯದ ದಿನಗಳು ಮುಂದೆ ಹೇಗೋ ಏನೋ ಎಂಬ ಆತಂಕ. ತಂದೆಯ ಶಾಸ್ತ್ರದ ಮಾತುಗಳು ಇವರ ಭರವಸೆಯ ದಿನಗಳು, ಆಶಾವಾದಿತನ ಎಲ್ಲವೂ ಇವರ ಅಂತರಾಳದಲ್ಲಿ ಸುತ್ತುತಿತ್ತು. ನಮ್ಮ ವಿರುದ್ಧ ಪಿತೂರಿ ಮಾಡಿ ನಮ್ಮ ಮನೆ ಮುರಿದು ಘೋರ ಬದುಕಿಗೆ ಸಾಕ್ಷಿಯಾದ ಕಿಡಿಗೇಡಿಗಳ ವಿರುದ್ಧ ಮತ್ತೆ ಎದ್ದು ನಿಂತು ಆತ್ಮವಿಶ್ವಾಸದಿಂದ ಸೆರೆಯನ್ನು ಅನುಭವಿಸುತ್ತಾರೆ. ಇಬ್ಬರ ನಡುವಿನ ವಿರಸ ಹೇಗೆ ಉಗ್ರರೂಪ ತಾಳಿ ದುಃಖಮಯವಾಗಿ ಬದುಕು ಸಿಮೀತ ಎನಿಸದೇ ಬಹು ದೂರ ಪ್ರಯಾಣಿಸಿ ದಾಂಪತ್ಯದಲ್ಲಿ ಬಂಧಿಯಾಗದೇ ಕಾನೂನಿನಲ್ಲಿ ಬಂಧಿಯಾಗುವಂತೆ ಮಾಡಿತು. ಸಮಾಜದ ಹಲವಾರು ವಿಕಾರ ಮುಖಗಳು ಸೇರಿ ನಡೆಸಿತು ಎನ್ನುವ ಇವರ ಅಭಿಪ್ರಾಯವನ್ನು ನೋಡಬಹುದು. ನಮ್ಮ ಬದುಕೇ ನಮ್ಮ ಕೈಯಲ್ಲಿ ಇರುವುದಿಲ್ಲ. ಅಂದುಕೊಂಡ ಗುರಿಯನ್ನು ಮುಟ್ಟಬೇಕೇಂದಿದ್ದು, ಮನುಷ್ಯನ ಛಲ, ಹಠ, ಅನಿರೀಕ್ಷಿತ ಘಟನೆಗಳಲ್ಲಿ ಕೊಚ್ಚಿಕೊಂಡು ಹೋಗುತ್ತದೆ. ಈ ಎಲ್ಲಾ ಬಯಕೆಗಳು ಆಸೆಗಳು ಕೈಗೂಡುವುದಿಲ್ಲ. ಭರವಸೆಯ ಬಾಳ್ವೆಯೊಂದಿಗೆ ಬಾಳಿದ ನೆನಪಿನೊಂದಿಗೆ ಬದುಕು ಉರುಳಬೇಕು. ಜೀವನದಲ್ಲಿ ಬಿರುಗಾಳಿ ಎದ್ದೇಳೇ ಏಳುತ್ತದೆ. ಆದರೆ ಮನುಷ್ಯನ ಮನಸ್ಸು ಅಮಲಿನಿಂದ ಹೊರಬರಬೇಕು. ಅಂತಹ ಜೀವಂತ ಪಾತ್ರದ ಸುಶೀಲಳಿಗೆ ಈ ಮಾತು ಸಾವೇ ಅಂತ್ಯವಲ್ಲ, ಜೀವ, ಜೀವನ, ಸಂಬಂಧ ಬಹು ಅಮೂಲ್ಯ. ಆದರೆ, ಇದೆಲ್ಲದರ ಕಾರಣ ಮತ್ತು ಪರಿಣಾಮವಾಗಿ ಬದುಕು ಸೀಮಿತ ಗ್ರಹಿಕೆಗೆ ಸಿಗದೇ ಕಣ್ಣೀರಲ್ಲಿ ಬೆಂದು ಹೋಯಿತು. ಉಸಿರು ಬಿಗಿ ಹಿಡಿದು ಓದುವಂತೆ ಸಾಹಿತ್ಯದ

ಶಕ್ತಿಯು ಬಳಕೆಯಾಗಿದೆ. ಇವರಿಗೆ ಅದ್ಭುತವಾದ ನೆನಪಿನ ಸ್ಮರಣೆ ಇದೆ. ಊರಿನ ಚಿತ್ರಣ, ಜೈಲಿನ ಅನುಭವ ಪೋಲಿಸ್ ಠಾಣೆಯ ಹಿಂಸೆ, ನೆರವಾದ ಗೆಳೆಯರು, ಅಪಪ್ರಚಾರ ದಿಗಿಲು ಆತಂಕಗಳು ಎಲ್ಲವನ್ನು ಸಹಜವಾಗಿ ಬರೆದಿದ್ದಾರೆ. ಇಲ್ಲಿನ ಎಲ್ಲಾ ಪಾತ್ರಗಳು ಜೀವಂತ ಪಾತ್ರಗಳೇ ಆಗಿರುತ್ತವೆ ಎಂದು ಹೇಳಬಹುದು. ಆದ್ದರಿಂದಲೇ ಕೆ.ಗೋವಿಂದರಾಜು ಅವರ ಮುಚ್ಚು ಮರೆಯಿಲ್ಲದೇ ಘಟನೆ ಮತ್ತು ಹೆಸರುಗಳನ್ನು ಕ್ರಮವಾಗಿ ಬರೆದಿದ್ದಾರೆ. ಜನಪದ ಚಿಂತಕರಾದ ಪ್ರೊ.ಕೃಷ್ಣಮೂರ್ತಿ ಹನೂರು ಅವರು ಹೇಳುವಂತೆ; ಕನ್ನಡದ ಆತ್ಮಕಥೆಗಳ ಸಾಲಿನಲ್ಲಿ "ಮನವಿಲ್ಲದವರ ಮಧ್ಯೆ" ಒಂದು ವಿಚಿತ್ರ ಸತ್ಯಕಥನವೆನಿಸುತ್ತದೆ.

ಸೆರೆಮನೆ ವಾಸದ experienceನ್ನು ಅತ್ಯಂತ ಸಮರ್ಥವಾಗಿ ಒಳನೋಟಗಳೊಡನೆ ಬರೆದಿದ್ದಾರೆ. ರೀತಿ ರೀವಾಜು, ಖೈದಿಗಳು, ಅಧಿಕಾರಿ ವರ್ಗ, ಪೋಲಿಸರು, ವೈದ್ಯರು, ಅಬ್ಬಾ ಎಷ್ಟೊಂದು character! ಎಷ್ಟೊಂದು ಸ್ವಭಾವಗಳು ಅಲ್ಲಿನ ಆಹಾರ, ಹಬ್ಬದ ಆಚರಣೆ, ಎಲ್ಲವನ್ನು ಎಲ್ಲರನ್ನು ಆಕ್ರಮಿಸಿರುವ ಭಷ್ಟಾಚಾರ, ಅಮಾನವೀಯ ಕ್ರೌರ್ಯ, ಮಹಿಳಾ ಯಾತನೆಯ ಹಿಂಸೆಯನ್ನು ಇವರು ಸೆರೆಯಲ್ಲಿದ್ದು ಕೊಂಡೇ ಸೆರೆ ಹಿಡಿದಿದ್ದಾರೆ. ಈ ನಿರೂಪಣಾ ಭಾವ ಪ್ರಸಿದ್ಧ freedom fightersನ್ನು ನೆನಪಿಗೆ ತರುತ್ತದೆ. ಲೇಖಕರು ಅನುಭವಿಸಿದ ಸಂಕಷ್ಟಗಳನ್ನು ಹಿಂಸೆ ಪರಾಭವಗಳನ್ನು ಬರಿಯ ಗೋಳಿನ ಪುರಾಣವಾಗಿಸದೇ ಒಂದು ಉತ್ತಮ ಕಲ್ಪಕತೆಯಾಗಿಸಿದ್ದಾರೆ. ವಾಸ್ತವತೆಯ ಹೆಸರಿನಲ್ಲಿ ನೀರಸ ವರದಿ ಮಾಡದೆ, ನೇರ ಸಂವಾದ ತಂತ್ರವನ್ನು ಉಪಯೋಗಿಸಿಕೊಂಡು ಕಥನವನ್ನು ಹೆಣೆದಿದ್ದಾರೆ. ಒಂದು ಹೇಳಿಕೆ ಅಥವಾ ಸಂದರ್ಭವನ್ನು ಅದರ ಆಶಯಕ್ಕೆ ಧಕ್ಕೆಯಾಗದಂತೆ ಕಟ್ಟಿಕೊಡುತ್ತಾರೆ. ನೊಂದವರಿಗೆ ದಾರಿ ದೀಪವಾಗುವ ಕೆಚ್ಚು ನೆಚ್ಚುಗಳಿಂದ ನಿಕೃಷ್ಟ ಹಂತದಿಂದ ಮೇಲೇರುವ ಸಾಧ್ಯತೆಯನ್ನು ತೋರಿಸುವುದರಿಂದ ಮಾನ್ಯವಾಗುತ್ತದೆ.

ಸುಶೀಲ ಮತ್ತು ಗೋವಿಂದರಾಜು ಅವರ ಬದುಕಿನ ಚೌಕಟ್ಟು ಒಂದೇ. ಆದರೆ, ಈ ಲೇಖಕರಿಗೆ ತನ್ನ ಚೌಕಟ್ಟನ್ನು ಹಿಗ್ಗಿಸಿಕೊಳ್ಳುವ ಸಾಮರ್ಥ್ಯ ಮತ್ತು ಮನಸ್ಸು ಎರೆಡು ಇದೆ. ಸುಶೀಲಳಿಗೆ ಇವೆರಡೂ ಇಲ್ಲ. ದಾಂಪತ್ಯದ ಮೂಲ ಕಲ್ಪನೆಯೇ ಇಲ್ಲ. ಬದುಕು ಬದ್ಧತೆಯ ಅರಿವು ಕನಸು ಮನಸಿನಲ್ಲಿಯೂ ಇಲ್ಲ. ಲೇಖಕರು ಇಂತಹವಳನ್ನು ಮದುವೆ ಮಾಡಿಕೊಂಡಿದ್ದಾರೆ. ಸುಶೀಲ ವೈವಾಹಿಕ ಪರಿಧಿಯೊಳಗೆ ತನ್ನ sexual interestನ್ನು ಬಂಧಿಸಲೂ ಇಲ್ಲ, ಪ್ರಕಟಿಸಲೂ ಇಲ್ಲ. ಸ್ವತಂತ್ರವಾಗಿ ಜವಾಬ್ದಾರಿ ಹೊತ್ತು ಏಕಾಂಗಿಯಾಗಿ ಬದುಕುವ ಧೈರ್ಯವೂ ಇರಲಿಲ್ಲ. ಬದುಕಿನ ತಿರುವುಗಳು ಹೇಗೆ ಬೇಕಾದರೂ ತಿರುಗಬಹುದು ಎಂಬುದಕ್ಕೆ ನಾಲ್ಕು ತಿಂಗಳ ಗರ್ಭಾವತಿಯಾಗಿದ್ದಾಗ ಸಾಯಲು ತೀರ್ಮಾನಿಸಿದ್ದಾಳೆ. ಇದು ಮೂರ್ಖ ಬಿಮ್ಮನಸೆಯ ಉಡಾಫೆ ಮನೋಭಾವವನ್ನು ತೋರಿಸುತ್ತದೆ. ತಾನು ಮಾಡುತ್ತಿರುವ

ಆಗುಹೋಗುಗಳ ಬಗೆಗೆ ಕೊಂಚ ಎಚ್ಚರಿಕೆಯನ್ನು, ಆಸಕ್ತಿಯನ್ನು, ಕಾಳಜಿಯಾಗಲಿ ಇಲ್ಲ. ನನ್ನ ಸಾವಿಗೆ ನಾನೇ ಕಾರಣ ಎಂದು death note ಬರೆಯಬಹುದಾಗಿತ್ತು. ವಿದ್ಯಾವಂತಳೇ ಆದರೂ ಪ್ರಯೋಜನವಿಲ್ಲ. ಆಪ್ತರೊಂದಿಗೆ ಸಮಾಲೋಚಿಸಿ counselling ಮಾಡಿ ಪರಿಹರಿಸಿಕೊಳ್ಳಬಹುದಿತ್ತು. ಆದರೆ, ಈ ಲೇಖಕರು ಬದುಕಿನ ಅಮೂಲ್ಯ ಕ್ಷಣಗಳನ್ನು ಸಂತೋಷ, ನೆಮ್ಮದಿಯನ್ನು ಕಳೆದುಕೊಂಡು ತೀರಾ ಹೀನಾವಸ್ಥೆಗೆ ಬಂದ ಕಾರಣವೇ ಸುಶೀಲಳ ಸಾವು. ಯಾವುದೇ ಉದ್ವಿಗ್ನತೆಗೆ ಒಳಗಾಗದೇ ನಡೆದದ್ದನ್ನು ಪ್ರಮಾಣಿಕವಾಗಿ ಇತರೆ ಆತ್ಮಕಥೆಗಳಿಗಿಂತ ಮುಕ್ತವಾಗಿ ಹೇಳಿದ್ದಾರೆ. ಗಂಡ ಹೆಂಡಿರ ವಿರಸದ ಕತೆಯಾಗುತ್ತದೆ. ಅಪರಾಧ, ಜೈಲು ಮತ್ತು ಶಿಕ್ಷೆಯ ಕಥೆಯಾಗುತ್ತದೆ. ಬದುಕಿನ ತಿರುವುಗಳಲ್ಲಿ ಹೇಗೆಲ್ಲಾ ಜೀವ, ಜೀವನ ಒಂದು ಸಾವಿನ ಸುತ್ತ ನಲುಗುತ್ತದೆ ಎಂಬ ಅನುಮಾನಗಳು ಕಾಡುವಂತೆ ಸೆಳೆಯುವ ಗುಣವುಳ್ಳ ಆತ್ಮಕಥೆ ಇದಾಗಿದೆ.

**ಪರಾಮರ್ಶನ ಗ್ರಂಥಗಳು**

1. ಎದೆಗೆ ಬಿದ್ದ ಅಕ್ಷರ, ದೇವನೂರು ಮಹಾದೇವ
2. ಕನ್ನಡ ವಿಷಯ ವಿಶ್ವಕೋಶ, ಮೈಸೂರು ವಿಶ್ವವಿದ್ಯಾನಿಲಯ
3. ಸಾಹಿತ್ಯ ವಿಮರ್ಶೆ, ಸಿ.ಎನ್.ರಾಮಚಂದ್ರನ್
4. ಸಂಕ್ಷಿಪ್ತ ಕನ್ನಡ ನಿಘಂಟು, ಕನ್ನಡ ಸಾಹಿತ್ಯ ಪರಿಷತ್ತು
5. ಮನವಿಲ್ಲದವರ ಮಧ್ಯೆ, ಕೆ.ಗೋವಿಂದರಾಜು
6. ಅನಾಥನ ಭೇಟಿ ಆನಾದಿಯ ಜೊತೆ, ಕೆ.ಗೋವಿಂದರಾಜು
7. ಹುಳಿ ಮಾವಿನ ಮರ, ಪಿ ಲಂಕೇಶ್
8. ಹೊಲಗೇರಿಯ ರಾಜಕುಮಾರ, ಡಾ, ಶಿವರುದ್ರ ಕೆ.ಕಲ್ಲೋಳಿಕರ
9. ಕನ್ನಡ ದಲಿತ ಆತ್ಮಕತೆಗಳು, ಡಾ.ಹೊಂಬಯ್ಯ
10. ದಲಿತ ಚಳುವಳಿ ಮತ್ತು ಸಾಹಿತ್ಯ, ಡಾ.ವಿ.ಮುನಿವೆಂಕಟಪ್ಪ